# ಶುಭವಾರ್ತೆ

7

ಉಚಿತ
ಮಾರಾಟಕ್ಕಲ್ಲ


> ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞ ಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವುದು ಉತ್ತಮವಾಗಿದೆ. — 1 ಸಮುವೇಲ 15:22.

## ಒಳ್ಳೆಯ ಕಾರ್ಯಗಳಷ್ಟೇ ಸಾಕೋ?

ಈ ಪ್ರಶ್ನೆಗೆ ಉತ್ತರ ನೀಡುವ ಮುನ್ನ ನಾವು ಮತ್ತೊಂದನ್ನು ಕೇಳಬೇಕು. ಯಾರನ್ನು ತೃಪ್ತಿಪಡಿಸಬೇಕು — ಒಳ್ಳೇದನ್ನು ಮಾಡುವವನನ್ನೋ ಅಥವಾ ಯಾರಿಗೆ ಒಳ್ಳೇದನ್ನು ಮಾಡುತ್ತೇವೋ ಅವರನ್ನೋ ಅಥವಾ ಇವರಿಬ್ಬರನ್ನೂ ಸೃಷ್ಟಿಸಿದ ದೇವರನ್ನೋ ? ಒಳ್ಳೇದನ್ನು ಮಾಡುವವರು ತಮ್ಮ ಒಳ್ಳೆಯ ಕಾರ್ಯದಿಂದ ತೃಪ್ತಿ ಹೊಂದುವುದು ಸಾಧ್ಯ. ಹಾಗೆಯೇ ಅಂಥಹ ಕಾರ್ಯಗಳಿಂದ ಪ್ರಯೋಜನ ಹೊಂದಿದವರೂಕೂಡ. ಆದರೆ ದೇವರನ್ನು ತೃಪ್ತಿ ಪಡಿಸುವುದೆಂದರೆ — ಒಳ್ಳೆಯ ಕಾರ್ಯಗಳಲ್ಲದೆ ಅದಕ್ಕಿಂತ ಹೆಚ್ಚಿನದು ಇರಬೇಕೆಂದು ಸತ್ಯವೇದವು ತಿಳಿಸುತ್ತದೆ.

**ದೇವರು ವಿಧೇಯತೆ; ನಂಬಿಕೆ ಮತ್ತು ಕ್ರಿಯೆಗಳನ್ನು ಅಪೇಕ್ಷಿಸುತ್ತಾನೆ.**

ದೇವರ ಅಪೇಕ್ಷೆಯೇನೆಂದರೆ — ವಿಧೇಯತೆ, ನಂಬಿಕೆ ಮತ್ತು ಕ್ರಿಯೆಗಳು. ಇವು — ಮೂರು ಒಬ್ಬ ವ್ಯಕ್ತಿಯಲ್ಲಿ ಕೂಡಿಕೊಂಡು ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕ ದೇವರು ಮಾನವನಿಗೆ ತೋರಿದ ಪ್ರೀತಿಯ ಪ್ರಮಾಣವನ್ನು ತನ್ನಲ್ಲಿ ಪ್ರತಿಬಿಂಬಿಸ ಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಅವಿಧೇಯತೆಗೆ ಪಶ್ಚಾತ್ತಾಪ ಪಡುವುದಕ್ಕಿಂತಲೂ ಮತ್ತು ಯಜ್ಞವನ್ನರ್ಪಿಸುವುದಕ್ಕಿಂತಲೂ ವಿಧೇಯರಾಗುವುದು ಉತ್ತಮವೆಂದು ಹಳೇ ಒಡಂಬಡಿಕೆಯಲ್ಲಿ ನಾವು ಓದುತ್ತೇವೆ(1 ಸಮು 15:22). ಹೊಸ ಒಡಂಬಡಿಕೆಯಲ್ಲಿ ಪೌಲನು ''ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯವೆಂದು'' ತಿಳಿಸುತ್ತಾನೆ.(ಇಬ್ರಿಯ 11:6 ). ಯಾಕೋಬನು ತನ್ನ ಪತ್ರಿಕೆಯಲ್ಲಿ ''ಕ್ರಿಯೆಗಳಿಲ್ಲದ ನಂಬಿಕೆ ಸತ್ತದ್ದು'' ಎಂದು ಬರೆಯುತ್ತಾನೆ.(ಯಾಕೋಬ 2:17,20 ). ಒಳ್ಳೆಯ ಕಾರ್ಯಗಳು ಮಾತ್ರವೇ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ.

ಎಲ್ಲಾ ಕಾಲಗಳಲ್ಲಿಯೂ ಅನೇಕ ವ್ಯಕ್ತಿಗಳು ಇತರರಿಗೆ ಒಳ್ಳೇದನ್ನು ಮಾಡುವುದರಲ್ಲಿ ತಮ್ಮ ಜೀವಿತವನ್ನೇ ಮುಡುಪಾಗಿಟ್ಟಿರಬಹುದು. ಆದರೆ ಅವರ ಕಾರ್ಯಗಳ ಹಿಂದೆ ಮತೀಯ ಉತ್ತೇಜಕತೆ ಇರಲಾರದು. ಕೇವಲ ಒಳ್ಳೆಯ ಕಾರ್ಯಗಳೇ ದೇವರನ್ನು ಮೆಚ್ಚಿಸಲು ಸಾಕಾಗುವುದಿಲ್ಲವೆಂದು ಸತ್ಯವೇದವು ಸ್ಪಷ್ಟವಾಗಿ ತಿಳಿಸುತ್ತದೆ.

**ಕೊರ್ನೇಲ್ಯನ ಉದಾಹರಣೆ.**

ಕೊರ್ನೇಲ್ಯನೆಂಬ ಒಬ್ಬ ರೋಮನ್ ಶತಾಧಿಪತಿಯ ವಿಷಯದಲ್ಲಿ ಬರೆದಿರುವಂಥಾದ್ದು ಈ ವಿಷಯಕ್ಕೆ ಒಂದು ಸ್ಪಷ್ಟ ಉದಾಹರಣೆಯಾಗಿದೆ. (ಅ.ಕೃ. 10ನೇ ಅಧ್ಯಾಯ ಓದಿ ). ಆತನು ದೇವರಿಗೆ ಪ್ರಾರ್ಥನೆ ಮಾಡುವ ಹಾಗೂ ಒಳ್ಳೆಯ ಕಾರ್ಯಗಳನ್ನು ಮಾಡುವ ಒಬ್ಬ ಮನುಷ್ಯನಾಗಿದ್ದನು. ಯಾಕಂದರೆ ''ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು, ಜನರಿಗೆ ಬಹಳವಾಗಿ ದಾನ ಮಾಡುತ್ತಾ ಇದ್ದನು'' ಎಂದು ಬರೆದಿರುವುದನ್ನು ನಾವು ಓದುತ್ತೇವೆ. (ಅ.ಕೃ.10:2). ಆದರೆ ಇಷ್ಟೇ ಸಾಕಾಗಿರಲಿಲ್ಲ. ದೇವರು ಆತನನ್ನು ಅಪೊಸ್ತಲನಾದ ಪೇತ್ರನ ಮೂಲಕ ಕ್ರಿಸ್ತನಲ್ಲಿ ನಂಬಿಕೆ ಮತ್ತು ವಿಶ್ವಾಸಗಳನ್ನು ಅರಿತುಕೊಂಡು, ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಬೇಕೆಂದು ಆತನನ್ನು ಸಂಧಿಸುವಂತೆ ಮಾಡುತ್ತಾನೆ.(ಅ.ಕೃ.10:48 ). ಇದರಿಂದ ಆತನ ಪರಿವರ್ತನೆಯ ಕಥೆಯು ದೇವರನ್ನು ಮೆಚ್ಚಿಸಲು ಒಳ್ಳೆಯ ಕಾರ್ಯಗಳು ಮಾತ್ರವೇ ಸಾಲದೆಂದು ಸ್ಪಷ್ಟವಾಗಿ ತೋರಿಸುತ್ತದೆ. ದೇವರ ಮಾರ್ಗಗಳ ಮತ್ತು ಉದ್ದೇಶದ ಜ್ಞಾನ ಮತ್ತು ಅರಿವಿನ ಮೇಲೆ ಆಧಾರಗೊಂಡ ವಿಧೇಯತ್ವ, ನಂಬಿಕೆ ಮತ್ತು ಕ್ರಿಯೆಗಳು ದೇವರನ್ನು ಮೆಚ್ಚಿಸಲು ಬೇಕಾಗಿರುವಂಥವುಗಳಾಗಿವೆ.

**ಅಬ್ರಹಾಮನ ಉದಾಹರಣೆ.**

ಹಳೇ ಒಡಂಬಡಿಕೆಯಲ್ಲಿ ಯೆಹೂದ್ಯ ಜನಾಂಗದ ಪಿತೃವಾದ ಅಬ್ರಹಾಮನಲ್ಲಿ ವಿಧೇಯತೆ, ನಂಬಿಕೆ ಮತ್ತು ಕ್ರಿಯೆಗಳಿಂದ ದೇವರನ್ನು ಮೆಚ್ಚಿಸಿದ ಒಬ್ಬ ವ್ಯಕ್ತಿಯನ್ನು ನಾವು ಕಾಣುತ್ತೇವೆ. ಆತನು ಜೀವಿಸಿದ ಕಲ್ದೀಯ ದೇಶವನ್ನು ಬಿಟ್ಟು ದೇವರು

....

ತೋರಿಸುವ ದೇಶಕ್ಕೆ ಹೋಗಲೇ ಬೇಕೆಂದು ದೇವರು ಆತನಿಗೆ ಹೇಳುತ್ತಾನೆ. (ಆದಿ. 12:1—4). ಆತನು ತಾನೆಲ್ಲಿಗೆ ಹೋಗುವೆನೆಂದು ಅರಿಯದೆ ದೇವರ ಆಜ್ಞೆಗೆ ವಿಧೇಯನಾದನು. ನಂತರ ಆತನು ಸ್ವಾಭಾವಿಕವಾಗಿ ತನ್ನ ಜೀವಿತದಲ್ಲಿ ಅಸಾಧ್ಯವಾದಂತ ಸಮಯದಲ್ಲಿ, ದೇವರು ಆತನಿಗೊಬ್ಬ ಮಗನನ್ನು ವಾಗ್ದಾನ ಮಾಡಿದಾಗ, ದೇವರು ಈ ಸೂಚಿತ ಕಾರ್ಯವನ್ನು ನಡೆಸುತ್ತಾನೆಂದು ಆತನಲ್ಲಿ ವಿಶ್ವಾಸವಿಟ್ಟಿದ್ದನು. ತತ್ಪರಿಣಾಮವಾಗಿ ವಾಗ್ದಾನದ ಮಗುವು ಹುಟ್ಟಿದನು. ಅವನು ಯುವಕನಾದಾಗ, ಅವನನ್ನು ತನಗೆ ಬಲಿಯಾಗಿ ಅರ್ಪಿಸ ಬೇಕೆಂದು ಕೇಳುವುದರಲ್ಲಿ ಅಬ್ರಹಾಮನ ವಿಧೇಯತೆ ಹಾಗೂ ವಿಶ್ವಾಸವನ್ನು ದೇವರು ಪರೀಕ್ಷಿಸುತ್ತಾನೆ. (ಆದಿ. 22:2; ಇಬ್ರಿಯ 11:17—19). ಅಬ್ರಹಾಮನ ವಿಶ್ವಾಸ ಎಷ್ಟು ಉನ್ನತವಾಗಿತ್ತೆಂದರೆ ದೇವರು ಏನು ಹೇಳಿದರೂ ಮಾಡಲು ಸಿದ್ಧನಾಗಿದ್ದನು. ಅಲ್ಲದೆ ಅವಶ್ಯ ಬಿದ್ದಲ್ಲಿ ದೇವರು ತನ್ನ ಮಗನನ್ನು ಸತ್ತವರೊಳಗಿಂದ ಎಬ್ಬಿಸುವನೆಂಬ ನಂಬಿಕೆಯೂ ಇತ್ತು. ಆದರೆ ಅವನ ಮಗನನ್ನು ಕೊಲ್ಲುವುದರಿಂದ ಅಬ್ರಹಾಮನ ಕೈಯನ್ನು ದೇವರು ತಡೆದನು. ಮತ್ತು ದೇವರು ಅಬ್ರಹಾಮನು ತನ್ನನ್ನು ಪ್ರೀತಿಸುತ್ತಾನೆಂದು ಘೋಷಿಸಿದನು. ಯಾಕಂದರೆ ದೇವರಿಗೆ ವಿಧೇಯನಾಗಲು ಅಬ್ರಹಾಮನು ತನ್ನ ಮುಪ್ಪಿನಲ್ಲಿ ಹುಟ್ಟಿದ ಹಾಗೂ ತನ್ನ ಪ್ರೀತಿಯ ಒಬ್ಬನೇ ಮಗನನ್ನು ಬಲಿಯಾಗಿ ಕೊಡುವಷ್ಟರ ಮಟ್ಟಿಗೂ ಸಿದ್ಧವಾಗಿದ್ದನು (ಆದಿ. 22:12). ಅಬ್ರಹಾಮನ ಜೀವಿತದಲ್ಲಿ ಇವುಗಳಿಂದಲೂ ಮತ್ತು ಇತರ ಘಟನೆಗಳಿಂದಲೂ, ತನ್ನ ಕಾರ್ಯಗಳಿಂದ ಅಥವ ಕ್ರಿಯೆಗಳಿಂದ ತೋರಿಸಿದ ಮಹತ್ತರ ವಿಶ್ವಾಸ ಹಾಗೂ ಎದೆಗಾಡದ ವಿಧೇಯತ್ವದ ಒಬ್ಬ ಮನುಷ್ಯನೆಂದು ಸತ್ಯವೇದವು ಘೋಷಿಸುತ್ತದೆ. ಈ ಗುಣಗಳು ಅಬ್ರಹಾಮನನ್ನು ದೇವರಿಗೆ ಅರ್ಪಿತವಾಗುವಂತೆ ಮಾಡಿದವು. ದೇವರು ಅವನನ್ನು ''ಅಬ್ರಹಾಮನು ನನ್ನ ಸ್ನೇಹಿತ'' ನೆಂದು ಕರೆದನಲ್ಲದೆ, ''ವಿಶ್ವಾಸಿಗಳ ತಂದೆ'' ಯೆಂದು ಅವನಿಗೆ ಹೆಸರಿಟ್ಟನು. ದೇವರು ಅವನಿಗೆ ಮಾಡಿದ ವಾಗ್ದಾನದ ನೆರವೇರುವಿಕೆಯಲ್ಲಿ ಹುಟ್ಟಿದ

## ಓದುಗರಿಗೆ.

ಕ್ರೈಸ್ತರಾದ ಅನೇಕ ಕುಟುಂಬಗಳಲ್ಲಿ ಸಾಮಾನ್ಯವಾಗಿ ಸತ್ಯವೇದವು ಇರುವುದುಂಟು. ಆದರೆ ಅದರ ಸರಿಯಾದ ರೀತಿಯ ಉಪಯೋಗವು ಅನೇಕರಿಗೆ ತಿಳಿದಿರಲಾರದು. ಒಬ್ಬೊಬ್ಬರು ಒಂದೊಂದು ರೀತಿಯ ಕ್ರಮದಲ್ಲಿ ಅದನ್ನು ಓದುವ ಅಭ್ಯಾಸವಿರುತ್ತದೆ. ಕೆಲವರಿಗೆ ಅದನ್ನು ಪ್ರತಿದಿನವೂ ಓದುವ ಅಭ್ಯಾಸವಿರಲಾರದು; ಮತ್ತೆ ಕೆಲವರಿಗೆ ಅದನ್ನು ಓದುವ ಅವಶ್ಯಕತೆಯೇ ಇಲ್ಲವೆಂಬ ಭಾವನೆ ಇರಬಹುದು. ಸತ್ಯವೇದವು ದೇವರಿಂದ ಬಂದ ವಾಕ್ಯವಾಗಿರುವುದರಿಂದ ಮಾನವನಿಗೆ ಅದರ ಅವಶ್ಯಕತೆಯು ಅತ್ಯಗತ್ಯವಾದುದಾಗಿದೆ. ಕೀರ್ತನಕಾರನಾದ ದಾವೀದನು, 'ಯಾವನು ಅದನ್ನು ಹಗಲಿರುಳು ಧ್ಯಾನಿಸುತ್ತಾನೋ ಅವನು ಧನ್ಯನು' ಎಂಬುದಾಗಿ ತಿಳಿಸಿದ್ದಾನೆ (ಕೀ. 1:2). 'ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ' ಎಂದು ಪೌಲನು ಬರೆಯುತ್ತಾನೆ (2 ತಿಮೋಥೆ 3:16). ಪ್ರತಿದಿನವೂ ಕೇವಲ ಅರ್ಧ ಗಂಟೆಯಷ್ಟು ಕಾಲ ದೇವರ ವಾಕ್ಯವನ್ನು ಓದಲು ಮೀಸಲಾಗಿರಿಸಿದಲ್ಲಿ ನಿಶ್ಚಯವಾಗಿ ಅದರಿಂದ ವೈಯುಕ್ತಿಕರಾಗಿಯೂ ತನ್ಮೂಲಕ ಇತರರಿಗೂ ಅದರಿಂದ ಬಹಳ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ. ಸತ್ಯವೇದವನ್ನು ಯಾವ ರೀತಿಯಲ್ಲಿ ಓದಬೇಕೆಂದು ಅನೇಕರು ಕೇಳಬಹುದು. ಎಲ್ಲರೂ ಒಂದೇ ರೀತಿಯ ಕ್ರಮವನ್ನು ಅನುಸರಿಸಿದಲ್ಲಿ ಅದರಿಂದಾಗುವ ಪ್ರಯೋಜನ ಬಹಳ. ನಾವೊಂದು ದೈನಂದಿನ ಪಠಣ ತಃಖ್ತೆಯನ್ನು ನಿರೂಪಿಸಿದ್ದೇವೆ. ಅದರ ರೀತ್ಯಾ ಪ್ರತಿದಿನವೂ ಸತ್ಯವೇದದ ಮೂರು ಭಾಗಗಳನ್ನು ಓದಬೇಕು. ಇದಕ್ಕೆ ಕೇವಲ 30 ನಿಮಿಷಗಳ ಕಾಲ ಸಾಕಾಗುತ್ತದೆ. ಕುಟುಂಬದಲ್ಲಿ ಎಲ್ಲರೂ ಸೇರಿ ಒಬ್ಬೊಬ್ಬರು 5 ವಚನಗಳಂತೆ ಅನುಕ್ರಮವಾಗಿ ಓದಬಹುದು ಇಲ್ಲವೇ ಒಬ್ಬರೇ ವೈಯುಕ್ತಿಕವಾಗಿ ಓದಬಹುದು. ಪ್ರಪಂಚಾದ್ಯಂತ ನಾವು ಇದೇ ಕ್ರಮದಲ್ಲಿ ಓದುತ್ತಿದ್ದೇವೆ. ಇದರ ಪ್ರಕಾರ ಮಾಡಿದಲ್ಲಿ ಒಂದು ವರ್ಷದಲ್ಲಿ ಹಳೇ ಒಡಂಬಡಿಕೆಯನ್ನು ಒಂದು ಸಾರಿಯೂ ಹೊಸ ಒಡಂಬಡಿಕೆಯನ್ನು ಎರಡು ಸಾರಿಯೂ ಓದಿದಂತಾಗುತ್ತದೆ. ಈ ಸತ್ಯವೇದ ಪಠಣ ತಃಖ್ತೆಯ ಪ್ರತಿಗಳು ನಿಮಗೆ ಎಷ್ಟು ಬೇಕೆಂದು ನಮಗೆ ತಿಳಿಸಿದಲ್ಲಿ ನಾವು ಉಚಿತವಾಗಿ ಕಳುಹಿಸುತ್ತೇವೆ. (ಅಂಚೆಕಾರ್ಡ್ ಬರೆದರೆ ಸಾಕು).

ಈ ಪತ್ರಿಕೆಯನ್ನು ಇನ್ನು ಮುಂದೆಯೂ ಉಚಿತವಾಗಿ ಪಡೆಯಲಿಚ್ಛಿಸುವವರು ನಮ್ಮ 5ನೇ ಸಂಚಿಕೆಯಲ್ಲಿರುವ ಕೂಪನ್ನಿನಲ್ಲಿ ಬರೆದು ತಿಳಿಸಲು ಕೋರಲಾಗಿತ್ತು. ಅನೇಕ ಓದುಗರು ತಿಳಿಸಿರುತ್ತಾರೆ. ಅವರಿಗೆ ಈ ಪತ್ರಿಕೆಯನ್ನು ಉಚಿತವಾಗಿ ಕಳುಹಿಸಲು ಮುಂದುವರಿಸುತ್ತೇವೆ. ಆದರೆ ಇನ್ನೂ ಆ ರೀತಿ ತಿಳಿಸದೇ ಇರುವವರು ಕೂಡಲೇ ನಮಗೆ ಅಂಚೆಕಾರ್ಡಿನಲ್ಲಿ ಬರೆದು ತಿಳಿಸ ಬೇಕಾಗಿ ಕೋರಿದೆ.

ಭಾ. ಚಂದುದಾಸ್,

ಸಂಪುಟ 1. ] [ಸಂಚಿಕೆ 7/1982

ಪ್ರಕಾಶಕರು:

ದಿ ಕ್ರಿಸ್ಟದೆಲ್ಫಿಯನ್ಸ,
23/4, ಬೆನ್ಸನ ರಸ್ತೆ, ಬೆಂಗಳೂರು — 560 046,
ಕರ್ನಾಟಕ.
(ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ. )
(ಮೇಲ್ಕಂಡ ಸ್ಥಳದಲ್ಲಿ ಪ್ರತಿ ಭಾನುವಾರ ಸಂಜೆ 6:30 ಕ್ಕೆ ಸತ್ಯವೇದ ಪಾಠ (ಸದ್ಯಕ್ಕೆ ಇಂಗ್ಲೀಷಿನಲ್ಲಿ) ನಡೆಯುತ್ತದೆ. ಆಸಕ್ತಿಯುಳ್ಳವರಿಗೆ ಸುಸ್ವಾಗತ.)

ಅಂತ್ಯದಲ್ಲಿ ಅಬ್ರಹಾಮನ ಶ್ರೇಷ್ಠ ಕುಮಾರನಾದ ಯೇಸುಕ್ರಿಸ್ತನ ಆಳ್ವಿಕೆಯಲ್ಲಿ ಶೀಘ್ರದಲ್ಲಿ ಯೇ ಈ ಭೂಮಿಯ ಮೇಲೆ ಸ್ಥಾಪಿಸಲ್ಪಡುವ ದೇವರ ರಾಜ್ಯದಲ್ಲಿ ಒಂದು ಪ್ರಾಮುಖ್ಯವಾದ ಸ್ಥಾನವನ್ನು ಆತನಿಗೆ (ಅಬ್ರಹಾಮನಿಗೆ) ವಾಗ್ದಾನ ಮಾಡಿದೆ. (ಗಲಾತ್ಯ 3:16).

**ಈ: ವಾಗ್ದಾನಗಳು ಏನನ್ನು ತೋರಿಸುತ್ತವೆ ?**

ಅಬ್ರಹಾಮನ ಜೀವಿತದಲ್ಲಿ ವಿಶ್ವಾಸವು ಎಂತಹ ಮಹತ್ತರ ಪಾತ್ರ ನಿರ್ವಹಿಸುತ್ತದೆಂಬುದನ್ನು ಆತನ ಉದಾಹರಣೆಯಲ್ಲಿ ನಾವು ನೋಡಿದೆವು. ದೇವರು ಕಣ್ಣಿಗೆ ಕಾಣದ, ಸಾಧಿಸದ ಮತ್ತು ನೋಡಲು ದುಸ್ಸಾಧ್ಯವಾದಂಥವುಗಳನ್ನು ಹೇಳಿದರೂ ಕೂಡ, ಅಬ್ರಹಾಮನು ಆತನಲ್ಲಿ (ದೇವರಲ್ಲಿ) ನಂಬಿಕೆಯಿಟ್ಟನು. ಇದೇ ಮಾನವನು ದೇವರಿಗೆ ಅರ್ಪಿಸುವಂತಾದುದು — ಆತನಲ್ಲಿ ಮತ್ತು ಆತನ ವಾಕ್ಯದಲ್ಲಿ ಪೂರ್ಣ (ಎದಿರಾಡದ) ನಂಬಿಕೆ; ಭರವಸೆ; ವಿಶ್ವಾಸ — ಇವೇ. ಸತ್ಯವೇದದಲ್ಲಿ ಇನ್ನೂ ಮುಂದುವರೆದು ನೋಡಿದಾಗ, ನಾವು ನಂಬಿಕೆಯಿಲ್ಲದವರಾದರೆ; ನಾವು ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ (ಇಬ್ರಿಯ 11:6). ದೇವರ ಸಂಬಂಧವಾದ ಎಲ್ಲಾ ವಿಷಯಗಳನ್ನೂ ಆತನ ವಾಗ್ದಾನಗಳನ್ನೂ ಸಂದೇಹಾತೀತವಾಗಿ ರುಜುವಾತು ಪಡಿಸಲು ಮಾನವನಿಗೆ ಸಾಧ್ಯವಿಲ್ಲ. ವಿಶ್ವಾಸವು ಆ ಅಂತರವನ್ನು ಮುಚ್ಚಬೇಕು. ಎಲ್ಲಿ ವಿಶ್ವಾಸವಿರುವುದಿಲ್ಲವೋ ಅಲ್ಲಿ ದೇವರೊಂದಿಗೆ ಹಿತಕರ ಬಾಂಧವ್ಯವಿರುವುದಿಲ್ಲ.

ಮತ್ತೊಂದು ಕಡೆ ನಾವು ವಿಶ್ವಾಸವಿದೆಯೆಂದು ಹೇಳಿ ಅದು ಕ್ರಿಯೆಗಳಿಂದ ಸಾಕ್ಷ್ಯಗೊಳ್ಳದಿದ್ದರೆ ಅದು ದೇವರನ್ನು ಮೆಚ್ಚಿಸಲು ಸತ್ತದ್ದು ಅಥವಾ ಪರಿಣಾಮಕಾರಿಯಲ್ಲದ್ದಾಗಿರುತ್ತದೆ. ಹೇಗೆ ವಿಶ್ವಾಸವಿಲ್ಲದ ಕ್ರಿಯೆಗಳು ಅಪೂರ್ಣವೋ ಹಾಗೆಯೇ ಕ್ರಿಯೆಗಳಿಲ್ಲದ ವಿಶ್ವಾಸವು ಸ್ವೀಕೃತವಲ್ಲದ್ದಾಗಿರುತ್ತದೆ. ಅವರು ವಿಶ್ವಾಸವಿಲ್ಲದೆ ಒಳ್ಳೆಯ ಕಾರ್ಯ ಮಾಡುವವರಾಗಲೀ ಅಥವಾ ತನ್ನ ವಿಶ್ವಾಸವನ್ನು ತೋರಿಸಿಕೊಡಲು ಏನನ್ನೂ ಮಾಡದಂಥ ನಂಬಿಗಸ್ತ ವ್ಯಕ್ತಿಯಾಗಲೀ ಎರಡೂ ವೈಪರೀತ್ಯಗಳು— ಒಬ್ಬ ವ್ಯಕ್ತಿಯನ್ನು ದೇವರ ದೃಷ್ಟಿಯಲ್ಲಿ ಕೊರತೆಯುಳ್ಳವನಾಗಿ ಉಳಿಸುತ್ತದೆ. ವಿಧೇಯತೆ, ವಿಶ್ವಾಸ ಮತ್ತು ಕ್ರಿಯೆಗಳ ಸಂಯೋಜನೆಯೇ ಅಗತ್ಯವಾಗಿರುವುದು.

ಕೊರ್ನೇಲ್ಯನ ಸಂಗತಿಯಲ್ಲಿ ನಾವು ನೋಡಿದಂತೆ, ಆತನು ಸಿಪಾಯಿಯಾಗಿ ವಿಧೇಯತೆಗೆ ಒಗ್ಗಿದ್ದನು. ಆತನ ಪ್ರಾರ್ಥನೆಯ ಮತ್ತು ಕಾರ್ಯಗಳ ಭಕ್ತಿಯುತ ಜೀವನದಲ್ಲಿ ದೇವರ ಮಾರ್ಗದ ಜ್ಞಾನ ಮತ್ತು ದೀಕ್ಷಾಸ್ನಾನ ಹೊಂದಲು ವಿಶ್ವಾಸವು ಕೊರತೆಯಾಗಿತ್ತು. ಆದರೂ ಆತನು ಪೇತ್ರನನ್ನು ಹುಡುಕಿಸಿ, ಆತನಿಂದ ರಕ್ಷಣೆಯ ಮಾರ್ಗವನ್ನು ಅರಿಯಲು ದೇವರ ಆಜ್ಞೆಯನ್ನು ಪಾಲಸುವುದರಲ್ಲಿ ಚುರುಕಾಗಿದ್ದನು.

ತನ್ನ ಜೀವಿತವೆಲ್ಲಾ ತಂದೆಯ ಚಿತ್ತಕ್ಕೆ ವಿಧೇಯನಾಗಿದ್ದ ಕರ್ತನಾದ ಯೇಸುಕ್ರಿಸ್ತನ ಜೀವಿತದಲ್ಲಿ ಪರಿಪೂರ್ಣ ಮಾದರಿಯನ್ನು ನಾವು ನೋಡುತ್ತೇವೆ. ಮಾನವ ಕುಲದ ರಕ್ಷಣಾರ್ಥವಾಗಿ ಪಾಪಕ್ಕೆ ಒಂದು ಬಲಿಯಾಗಿ ತನ್ನನ್ನು ತಾನೇ ಮನಃಪೂರ್ವಕವಾಗಿ ಒಪ್ಪಿಸಿಕೊಟ್ಟಲ್ಲಿ, ದೇವರು ಆತನ ರಾಜ್ಯದಲ್ಲಿ ಎಂದೆಂದಿಗೂ ರಾಜನಾಗಿರಲು ಆತನನ್ನು ಸತ್ತವರೊಳಗಿಂದ ಎಬ್ಬಿಸುತ್ತಾನೆಂದು, ಆತನಿಗೆ ದೇವರಲ್ಲಿ ಸಂಪೂರ್ಣ ವಿಶ್ವಾಸವಿತ್ತು. ನಾವೂ ಕೂಡ ಅಬ್ರಹಾಮನ ಮತ್ತು ದೇವರ ಇತರ ವಿಶ್ವಾಸಿಗಳೊಂದಿಗೆ ದೇವರ ರಾಜ್ಯದಲ್ಲಿ ಯೇಸುಕ್ರಿಸ್ತನಿಂದ ನಿತ್ಯಜೀವವನ್ನು ಪಡೆಯಲು, ವಿಧೇಯತ್ವ, ವಿಶ್ವಾಸ ಮತ್ತು ಕ್ರಿಯೆಗಳ ಈ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಬೇಕೆಂದು ದೇವರು ಅಪೇಕ್ಷಿಸುತ್ತಾನೆ.

ಆದರೆ ಅನೇಕರಲ್ಲಿ ಈ ಕೆಲವು ಪ್ರಶ್ನೆಗಳು ಉದ್ಭವಿಸಬಹುದು —

(1) ನಾವು ಎಷ್ಟೇ ಕಠಿಣ ಪ್ರಯತ್ನ ನಡೆಸಿದರೂ ಯಾರೂ ಪರಿಪೂರ್ಣರಾಗಲು ಸಾಧ್ಯವಿಲ್ಲದಿರುವಾಗ, ವಿಧೇಯತ್ವವು ಹೇಗೆ ಪ್ರಾಮುಖ್ಯವಾಗುತ್ತದೆ?

(2) ಇದರಲ್ಲಿ ದೇವರ ಕೃಪೆಯ ಬಗ್ಗೆ ಏನೂ ಹೇಳಿಲ್ಲವಲ್ಲ?

(3) ಯೇಸುಕ್ರಿಸ್ತನು ನಾವು ರಕ್ಷಿಸಲ್ಪಡಬೇಕೆಂದು ಸಾಯಲಿಲ್ಲವೇ?

ಈ ಕೆಲವು ಪ್ರಶ್ನೆಗಳಿಗೆ ಅಪೋಸ್ತಲನಾದ ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಉತ್ತರ ಕೊಡುತ್ತಾನೆ. ಅದರಲ್ಲಿ ಬರುವ ವಚನಗಳನ್ನು ತುಂಬಾ ಎಚ್ಚರಿಕೆಯಿಂದ ಓದಿ. ನಂತರ ಇನ್ನೂ ನಿಮ್ಮಲ್ಲಿ ಪ್ರಶ್ನೆಗಳಿದ್ದರೆ, ಅವುಗಳಿಗೆ ಉತ್ತರ ಕೊಡಲು ನಾವು ಸಂತೋಷದಿಂದ ಪ್ರಯತ್ನಿಸುತ್ತೇವೆ.°

ಸುವಾರ್ತೆಯು ಮೊಟ್ಟಮೊದಲು ರೋಮ್ ಪಟ್ಟಣವನ್ನು ಹೇಗೆ ಮುಟ್ಟಿತು ಎಂಬುದರ ಬಗ್ಗೆ ಖಚಿತವಾಗಿ ಗೊತ್ತಿಲ್ಲ. ಆದರೂ ಲೂಕನು, ಪಂಚಾಶತ್ತಮದ ದಿನದಂದು ನೆರಿದ ಜನರ ಗುಂಪಿನಲ್ಲಿ ರೋಮ್ ನಿಂದ ಬಂದ ಯೆಹೂದ್ಯರೂ ಹಾಗೂ ಯೆಹೂದ್ಯ ಮತಾವಲಂಬಿಗಳೂ ಇದ್ದರೆಂದು ತಿಳಿಸುತ್ತಾನೆ.(ಅ.ಕೃ.2:10). ಅವರಲ್ಲಿ ಕೆಲವರು ರೋಮ್ ಪಟ್ಟಣಕ್ಕೆ ಹಿಂದಿರುಗುವ ಮೊದಲು ದೇವರ ರಾಜ್ಯದ ಸುವಾರ್ತೆಯನ್ನು ನಂಬಿ, ಯೇಸುಕ್ರಿಸ್ತನ ರಕ್ಷಿಸುವ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿರುವದು ವಿಶೇಷವಾಗಿ ಸಂಭವನೀಯವೆಂದು ತೋರುತ್ತದೆ. ಹಿಂದಿರುಗಿ ತಮ್ಮ ಸ್ಥಳಗಳಿಗೆ ಹೋದಂಥ ಅವರು ಈ ಶುಭವಾರ್ತೆಯನ್ನು ಕೇಳಲು ಇಷ್ಟವುಳ್ಳವರೆಲ್ಲರಿಗೆ ನಿಶ್ಚಯವಾಗಿಯೂ ಹರಡಿರುತ್ತಾರೆ. ಈ ರೀತಿಯಾಗಿ ಕ್ರೈಸ್ತ ವಿಶ್ವಾಸಿಗಳ ಗುಂಪನ್ನು ಅಂದರೆ ಒಂದಕ್ಕಿಂತ ಹೆಚ್ಚಿನ ''ಸಭೆ'' ಗಳನ್ನು ರಾಜಧಾನಿಯಲ್ಲಿ ಸ್ಥಾಪಿಸಿ, ಯೆಹೂದ್ಯ ಸಭಾ ಮಂದಿರಗಳನ್ನು ಒಡೆದು, ನಂತರ ಅನ್ಯ ಜನಾಂಗ

° 2ನೇ ಪುಟದಲ್ಲಿರುವ ಬೆಂಗಳೂರಿನ ವಿಳಾಸಕ್ಕೆ ಬರೆಯುವುದು.

ಗಳ ಮತಾಂತರಿಗಳನ್ನು ಆಕರ್ಷಿಸಿರಬಹುದು.

**ಈ ಪತ್ರವನ್ನು ಬರೆದ ಸಂದರ್ಭ ಮತ್ತು ಮುಖ್ಯ ವಿಷಯ ವಸ್ತುಗಳು.**

ತನ್ನ ಸೇವೆಯ ಮೂರನೆಯ ಪ್ರಯಾಣದಲ್ಲಿ ಎಫೆಸದಲ್ಲಿರುವಾಗ ಪೌಲನು ರೋಮ್ ನಲ್ಲಿರುವ ಕ್ರೈಸ್ತರನ್ನು ಸಂಧಿಸಬೇಕೆಂದು ತನ್ನ ಆಕಾಂಕ್ಷೆಯನ್ನು ಪ್ರಕಟಪಡಿಸುತ್ತಾನೆ.(ಅ.ಕೃ.19:21). ಆದರೆ ಪಂಚಾಶತ್ತಮ ದಿವಸದ ಹಬ್ಬಕ್ಕೆ ಮೊದಲು ಯೆರೂಸಲೇಮಿಗೆ ಹೋಗಬೇಕೆಂದು ಇಚ್ಛಿಸುತ್ತಾನೆ.(ಅ.ಕೃ.20:10). ಇದು ಅಪೋಸ್ತಲರ ಕೃತ್ಯಗಳ 2ನೇ ಅಧ್ಯಾಯದಲ್ಲಿ ತಿಳಿಸಿರುವಂತೆ ಪೇತ್ರನು ಅನ್ಯ ದೇಶಗಳಿಂದ ಬಂದಂತವರಿಗೆ ಮನ ಮುಟ್ಟುವ ಉಪನ್ಯಾಸ ಮಾಡಿದ 20 ವರ್ಷಗಳ ನಂತರವಾಗಿದೆ. ಈ ಪ್ರಯಾಣದಲ್ಲಿ ಪೌಲನು ಮೂರು ತಿಂಗಳುಗಳ ಕಾಲ ಕೊರಿಂಥದಲ್ಲಿ ಉಳಿಯುತ್ತಾನೆ. ಆತನು ಅಲ್ಲಿರುವಾಗಲೇ ಈ ಪತ್ರವನ್ನು ಬರೆದಿರಬಹುದೆಂದು ತೋರುತ್ತದೆ. ಕಾಲಕ್ರಮದ ರೀತಿ ನೋಡಿದರೆ ಅದು ಅ.ಕೃ. 20ನೇ ಅಧ್ಯಾಯದ 2 ಮತ್ತು 3ನೇ ವಚನಗಳ ಮಧ್ಯೆ ಬರುತ್ತದೆಂದು ತೋರುತ್ತದೆ. ಕ್ರಿ.ಶ. 55ರ ವಸಂತದಲ್ಲಿ ಫೋಯಿಬೆಯ ಹಸ್ತ ಈ ಪತ್ರವನ್ನು ಕಳುಹಿಸಿರುವುದು ಸಂಭವನೀಯವಾಗಿದೆ. ಹೊಸ ಒಡಂಬಡಿಕೆಯ ಭಾಗದಲ್ಲಿ ಸೇರಿಸಿರುವ ಪೌಲನ ಬರಹಗಳಲ್ಲಿ ಇದೇ ಅತ್ಯಂತ ದೊಡ್ಡ ಪತ್ರಿಕೆಯಾಗಿದೆ. ಈ ಪತ್ರಿಕೆಯು ''ವಿಶ್ವಾಸದಿಂದಲೇ ನೀತಿನಿರ್ಣಯ'' ವೆಂಬ ಶೈಲಿಯ ಪೂರ್ಣ ವ್ಯಾಖ್ಯಾನವನ್ನು ವಿಶ್ವಾಸಿಗಳ ಪ್ರತಿಯೊಂದು ಪೀಳಿಗೆಗೂ ಕೊಟ್ಟದೆಯಲ್ಲದೆ, ತನ್ನ ಸ್ವಜನಾಂಗವಾಗಿ ಮಾಡಿದ ನಂತರ ಇಸ್ರಾಯೇಲನ್ನು ದೇವರು ತಾತ್ಕಾಲಿಕವಾಗಿ ತಿರಸ್ಕರಿಸಿದ ಅಸಂಗತ ಘಟನೆಯ ಮೇಲೆ ದೈವ ಪ್ರೇರಿತ ವಿಮರ್ಷೆಯನ್ನು ಕೊಟ್ಟು, ಅಂತ್ಯದಲ್ಲಿ ಅವರು ರಕ್ಷಿಸಲ್ಪಡುತ್ತಾರೆಂಬುದನ್ನು ತಿಳಿಸುತ್ತದೆ. ನಂತರ ವಿಶ್ವಾಸಿಯು ಜೀವಿತದ ಮೇಲೆ ಕಾರ್ಯರೂಪದ ಸಲಹೆಗಳನ್ನು ಕೊಡುತ್ತಾನೆ.

**ಧರ್ಮವಿಲ್ಲ ಪ್ರಪಂಚದ ದುಷ್ಟತನ.**

ರೋಮ್ ನಲ್ಲಿರುವ ಎಲ್ಲಾ ವಿಶ್ವಾಸಿಗಳಿಗೆ ಪ್ರಾರಂಭದ ವಂದನೆಯ ನಂತರ, ಅವರನ್ನು ನೋಡಲು ತಾನು ಎಷ್ಟು ಕಾತರನಾಗಿರುವೆನೆಂದು ತಿಳಿಸಿ, ಪ್ರಾಚೀನ ಪ್ರಪಂಚದ ನೈತಿಕ ಅವನತಿಗೆ ವಿರುದ್ಧವಾಗಿ ಎಂದಿಗೂ ಬರೆಯದ ಅತ್ಯಂತ ಕಠಿಣವಾದ ದೂಷಣೆಗಳನ್ನು ಬರೆಯಲು ಅಪೋಸ್ತಲನು ತೊಡಗುತ್ತಾನೆ (ರೋಮಾ. 1:18—32). ಎಲ್ಲಾ ವಸ್ತುಗಳ ಸೃಷ್ಟಿಕರ್ತನಾದ ದೇವರು, ನಮ್ಮ ಸುತ್ತಮುತ್ತಲಿರುವ ಪ್ರಕೃತಿಯ ಪ್ರಪಂಚದಲ್ಲಿ ತನ್ನ ಅಸ್ತಿತ್ವ ಹಾಗೂ ಶಕ್ತಿಯ ಸುಸ್ಪಷ್ಟ ಸಾಕ್ಷ್ಯವನ್ನು ಬಿಟ್ಟಿದ್ದಾನೆ. ಯಾಕೆಂದರೆ ಅವರು ಮಾನವ-ನಿರ್ಮಿತ ಬೊಂಬೆಗಳನ್ನು ಪೂಜಿಸುವಾಗ ಮತ್ತು ಅಸ್ವಾಭಾವಿಕವಾದ ಭೋಗಾಭಿಲಾಷೆಗಳನ್ನು ಅನುಸರಿಸುವಾಗ ಅವರು ನೆಪ ಹೇಳಲು ಸಾಧ್ಯವಿಲ್ಲ. ಈ ಎಚ್ಚರಿಕೆಯು ಅವಕಾಶವಿರುವ ಹಾಗೂ ಅವನತಿ ಹೊಂದುತ್ತಿರುವ ನಮ್ಮ ಕಾಲಕ್ಕೂ ಸಹ ಅನ್ವಯವಾಗುತ್ತದೆ. ದೇವರು ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳ ಪ್ರಕಾರ ಪ್ರತಿಫಲವನ್ನು — ಒಳ್ಳೇದಾಗಲಿ ಕೆಟ್ಟದ್ದಾಗಲಿ ಕೊಡುತ್ತಾನೆಂಬ ತತ್ವವು ಈ ಪತ್ರಿಕೆಯ ಪೂರಾ ಕಂಡು ಬರುತ್ತದೆ.(ರೋಮಾ 2:6; ಕೀ 62:12; ಜ್ಞಾ 24:12). ಆದ್ದರಿಂದ ಇತರರಲ್ಲಿ ದೋಷ ಹೆಣಸುವುದು ನಿಷ್ಫಲವಾದಂತಾಯಿತು (ನಾವೆಲ್ಲರೂ ಪಾಪಕ್ಕೆ ಒಳಗಾಗುವಂತವರೇ ). ಯಾಕೆಂದರೆ ನಾವೇ ಅದಕ್ಕಿಂತ ಹೆಚ್ಚಿನ ಪಾಪಗಳನ್ನು ಮಾಡುವ ದೋಷಿಗಳಾಗಿದ್ದೇವೆ (ರೋಮಾ 2:1—4). ಇದು ಯೆಹೂದ್ಯರ ಬಲಹೀನತೆಯೂ ಆಗಿತ್ತು. ಏಕೆಂದರೆ ಅವರು ದೇವರೊಂದಿಗಿದ್ದ ತಮ್ಮ ವಿಶೇಷ ಬಾಂಧವ್ಯದ ಬಗ್ಗೆ ಅವರು ಹೊಗಳಿಕೊಳ್ಳುವವರಾಗಿದ್ದರು. ಆದರೂ ಅವರು ಆತನ ಕಟ್ಟಳೆಗಳನ್ನು ಪಾಲಿಸುವದರಲ್ಲಿ ಸೋತರಲ್ಲದೆ ತತ್ಪರಿಣಾಮವಾಗಿ ಆತನ ಪರಿಶುದ್ಧ ನಾಮವನ್ನು ಅಪಮಾನಗೊಳಿಸಿದರು(ರೋಮಾ 2:17—24).

ಈ ಒಂದು ಕಿನ್ನಲಿಯಲ್ಲಿ ಪೌಲನು ಸತ್ಯವೇದದ ಬೋಧನೆಯ ಮೂಲ ತತ್ವಗಳಲ್ಲೊಂದನ್ನು ಪುನರುಚ್ಚರಿಸುತ್ತಾನೆ : ದೇವರ ನ್ಯಾಯವಾದ ತೀರ್ಪು ಪ್ರಕಟವಾಗುವ ಕಾಲ ಬರುತ್ತದೆ — ವಿಶ್ವಾಸವಿಲ್ಲದವರು ಕುಚೋದ್ಯ ಮಾಡುವ ನ್ಯಾಯತೀರ್ಪಿನ ದಿನ (ರೋಮಾ 2:5). ಆ ದಿನದಲ್ಲಿ — ಸ್ಪಷ್ಟವಾಗಿ ಅಲ್ಲಿಯ ತನಕವಲ್ಲ — ಯಾರು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು (ರೋಮಾ 2:5). ಯಾರು ಸತ್ಯವನ್ನು ತಿರಸ್ಕರಿಸುತ್ತಾರೋ (ವಿಶೇಷವಾಗಿ ದೇವರ ಅಸ್ತಿತ್ವ ಹಾಗೂ ಅಧಿಕಾರ ) ಮತ್ತು ಕೆಟ್ಟದ್ದನ್ನು ಅನುಸರಿಸುತ್ತಾರೋ ಅವರ ಮೇಲೆ ಕೆಟ್ಟದ್ದನ್ನು ನಡೆಸುವವರಿಗಾಗಿ ಕೂಡಿಟ್ಟಿರುವ ದೇವರ ಕೋಪ ರೌದ್ರಗಳು ಬರುವವು (ರೋಮಾ 2:8—9). ''ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು (ಇಬ್ರಿಯ 10:31).

(ಮುಂದುವರೆಯುವದು.

ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರೂ ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು.
— ಮತ್ತಾಯ 7:21.

## ಮೂಲ ನಂಬಿಕೆಗಳು. (ಹಿಂದಿನ ಸಂಚಿಕೆಯಿಂದ)

4. ಪಾಪರಹಿತನಾದ ಕ್ರಿಸ್ತನಲ್ಲಿ ಪಾಪವು ಹೇಗೆ ನಾಶಪಡಿಸಲ್ಪಟ್ಟಿತು? ಮತ್ತು ಒಬ್ಬ ನೀತಿವಂತ ಮನುಷ್ಯನ ರಕ್ತ ಚೆಲ್ಲುವಿಕೆಯಿಂದ ದೇವರ ನೀತಿಯು ಹೇಗೆ ಪ್ರಕಟವಾಗಲ್ಪಟ್ಟಿತು?

ಯಾಕಂದರೆ ಆದಾಮನ ಶಾಪಗ್ರಸ್ತ ಜನಾಂಗದಲ್ಲಿ ಹುಟ್ಟಿದ್ದರಿಂದ, ಮತ್ತು ಅವರ ಶಾಪ ಗ್ರಸ್ತ ಪ್ರಕೃತಿಯನ್ನು ಹೊಂದಿದ್ದರಿಂದ, ಅವರೊಂದಿಗೆ ಆದಾಮನ ಅವಿಧೇಯತ್ವದ ಪರಿಣಾಮಕ್ಕೆ ಒಳಪಡಬೇಕಾಯಿತು. ಆದ್ದರಿಂದ ಆತನ ಬಹಿರಂಗ ದಂಡನೆಯು ದೇವರಿಂದ ಮಾನವನಿಗೆ ಯಾವುದು ಸಲ್ಲಬೇಕಾಗಿತ್ತೋ ಅದರ ಬಹಿರಂಗ ಪ್ರದರ್ಶನವಾಗಿತ್ತು. ಯಾರಲ್ಲಿ ಈ ನಿರ್ದೋಷೀಕರಣ ನಡೆಸಲ್ಪಡಬೇಕಿತ್ತೋ ಅವನ ಮೂಲಕ ಮಾನವರು ಪಾಪ ನಿವಾರಣೆ ಮಾಡಿಕೊಳ್ಳಲು ಕರೆಯಲ್ಪಡುವ ಮುನ್ನ ಈ ಕಾರ್ಯದ ಅಗತ್ಯತೆಯನ್ನು ದೇವರು ಇಚ್ಛಿಸಿದನು.

> ''ಇಗಲ್ಲದೆ ಮಕ್ಕಳು ರಕ್ತಮಾಂಸಧಾರಿಗಳಾಗಿರುವುದರಿಂದ ಆತನೂ ಅವರಂತೆಯೇ ಆದನು; ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು (ಅಥವಾ ಶರೀರದಲ್ಲಿನ ಪಾಪವನ್ನು ) ಅಡಗಿಸಿ (ನಾಶ ಮಾಡುವದಕ್ಕೆ) ಬಿಡುವುದಕ್ಕೆ .... ಅವರಂತೆ ರಕ್ತ ಮಾಂಸಧಾರಿಯಾದನು. (ಇಬ್ರಿಯ 2:14—15).
>
> ತನ್ನ ಬಲಿಯಿಂದ ಆತನು ಪಾಪ ನಿವಾರಣೆ ಮಾಡಿದನು (ಇಬ್ರಿಯ 9:26). ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನು (ರೋಮಾ 1:3) ಮರಣವು ಇನ್ನೂ ಆತನನ್ನು ಆಳುವುದಿಲ್ಲವೆಂದು ನಮಗೆ ತಿಳಿದದೆ. ಆತನು ಸತ್ತದ್ದು ಒಂದೇ ಸಾರಿ. ಅದು ಪಾಪದ ಪಾಲಿಗೆ. (ರೋಮಾ 6:9—10).

5. ಯೇಸುಕ್ರಿಸ್ತನು ಹೇಗೆ ಇತರ ಮಾನವರಿಗಿಂತ ಈ ವಿಷಯದಲ್ಲಿ ಭಿನ್ನವಾಗಿದ್ದನು?

ಯೇಸುವು ಇತರ ಮಾನವರಿಗಿಂತ ಎಲ್ಲಿ ಭಿನ್ನವಾಗಿದ್ದನೆಂದರೆ, ತನ್ನ ಕಳಂಕರಹಿತ ಗುಣಗಳಿಂದ, ತನ್ನ ತಂದೆಯನ್ನು ಮೆಚ್ಚಿಸಿದ್ದರಿಂದ. ಯೇಸುವಿಗೆ ಯಾವ ಕ್ಷಮಾಪಣೆಯೂ ಬೇಕಿರಲಿಲ್ಲ. ಇದೇ ಆತನ ಪುನರುತ್ಥಾನಕ್ಕೆ ಮಾರ್ಗವನ್ನು ತೆರೆದಿದ್ದು. ಯಾಕಂದರೆ ಆತನು ಇತರ ಮಾನವರಂತೆ ಪಾಪಿಯಾಗಿದ್ದಲ್ಲಿ, ಅವರ ಮೇಲೆ ಮರಣದ ಅಧಿಕಾರವಿದ್ದಂತೆಯೇ ಆತನನ್ನೂ ಕೂಡ ಮರಣವು ಹಿಡಿದಿಟ್ಟಿರಬೇಕಾಗಿತ್ತು. ಆದರೆ ಆತನ ಕ್ರೂಜೆಯಲ್ಲಿ ಪಾಪವು ನಾಶಮಾಡಲ್ಪಟ್ಟನಂತರ, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು ಮತ್ತು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದರಿಂದ, ''ಮರಣವು ಇನ್ನೊಂದಿಗೂ ಆತನ ಮೇಲೆ ಅಧಿಕಾರ ಹೊಂದದಿಲ್ಲ''. "ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ ಮತ್ತು ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ'' ''ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಗಿದ್ದಾನೆ'' (ಇಬ್ರಿಯ 7:26). ಆತನು ಸರ್ವ ವಿಷಯಗಳಲ್ಲಿಯೂ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ (ಇಬ್ರಿ 4:15). ನನ್ನಲ್ಲಿ ಪಾಪವನ್ನು ತೋರಿಸಿ ಕೊಡುವವರು ಯಾರಿದ್ದಾರೆ? (ಯೋಹಾನ 8:46). ಈತನು ಪ್ರಿಯನಾಗಿರುವ ನನ್ನ ಮಗನು. ಈತನನ್ನು ನಾನು ಮೆಚ್ಚಿದ್ದೇನೆ (ಮತ್ತಾಯ 3:17) ಆತನಲ್ಲಿ ಪಾಪವಿಲ್ಲ (1 ಯೋಹಾನ 3:5) ಮರಣವು ಆತನನ್ನು ಹಿಡುಕೊಂಡಿರುವುದು ಅಸಾಧ್ಯವಾಗಿತ್ತು.... ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡುವುದಿಲ್ಲ. (ಅ.ಕೃ.2:24,27).

(ಮುಂದುವರೆಯುವುದು.

### ವಿಶೇಷ ಸುದ್ದಿ

### ಅಂಚೆಯ ಮೂಲಕ ಸತ್ಯವೇದ ಪಾಠಗಳು.

**ಮಕ್ಕಳಿಗೆ.**

8 ರಿಂದ 12 ವಯಸ್ಸಿನ ಮಕ್ಕಳಿಗೆ ಅಂಚೆ ಮೂಲಕ ಇಂಗ್ಲೀಷಿನಲ್ಲಿ ಸತ್ಯವೇದ ಪಾಠಗಳನ್ನು ಉಚಿತವಾಗಿ ಕಳುಹಿಸುತ್ತೇವೆ. ವಿವರಗಳಿಗೆ ಕೂಡಲೇ ಬರೆಯಿರಿ :—

ಸಿಸ್ಟರ್ ಬಾರ್ಬರಾ ಅಲಾನ್ಸನ್,
23/4, ಬೆನ್ಸನ್ ರಸ್ತೆ,
ಬೆಂಗಳೂರು—560 046.

**ವಯಸ್ಕರಿಗೆ.**

ಇಂಗ್ಲೀಷ್ ಮತ್ತು ತೆಲುಗು ಭಾಷೆಗಳಲ್ಲಿ ಅಂಚೆಯ ಮೂಲಕ ಉಚಿತವಾಗಿ ಸತ್ಯವೇದ ಪಾಠಗಳನ್ನು ಕಳುಹಿಸುತ್ತೇವೆ. ಇಂದೇ ಬರೆಯಿರಿ :—

ಇಂಗ್ಲೀಷ :

ದಿ ಕ್ರಿಸ್ಟಡೆಲ್ಫಿಯನ್ಸ್,
23/4 ಬೆನ್ಸನ್ ರಸ್ತೆ, ಬೆಂಗಳೂರು 560046.

ತೆಲುಗು:

ದಿ ಕ್ರಿಸ್ಟಡೆಲ್ಫಿಯನ್ಸ್,
ಜಿ.ಪಿ.ಓ. ಬಾಕ್ಸ್ 159
ಹೈದರಾಬಾದ 500 001, ಆಂಧ್ರ ಪ್ರದೇಶ.